

## The one reading a poem

**The one reading a poem**
**in the morning, in bed**
**for about eight minutes,**
**gets up, does what he needs to do, goes out**
**and endures well the remaining hours**

ಇದನ್ನು ಓದಿದ ಕೂಡಲೇ ಅವರಿಗೆ ಮಿಂಚಂಚೆ ಕಳುಹಿಸಿದೆ. 'ಮಜವಾಗಿದೆ. ಇದನ್ನು ನಾನು ಬರೆದರೆ ಹೇಗಿರಬಹುದು?'. 'ಬರೆಯಿರಿ' ಅಂದರು. ಆಗ ಕೆಳಗಿನ ಪದ್ಯವನ್ನು ಬರೆದೆ.

## ಕವಿತೆ ಬರೆಯುವವ

ರಾತ್ರಿ ಅವನು ಯಾವಾಗ ಬೇಕು ಆಗ ಏಳುತ್ತಾನೆ
ಏನೇನೋ ತಡಕಾಡುತ್ತಾನೆ
ಸಿಗರೇಟ ಮೇಲೆ ಸಿಗರೇಟು ಹೊತ್ತಿಸುತ್ತಾನೆ
ನಿದ್ದೆ ಬಂದರೆ ಒಮ್ಮೊಮ್ಮೆ
ಹಾಗೆಯೇ ಮಲಗಿಬಿಡುತ್ತಾನೆ

ಎದ್ದ ಹಾಸಿಗೆಯಲ್ಲೇ ಮಲಗಿ ಕಾಫಿ ಕೇಳುತ್ತಾನೆ
ವಾಶ್‌ರೂಮಿಗೆ ಹೋಗುವುದು ಬರುವುದು ಮಾಡುತ್ತಾನೆ
ಅವಸರವಸರದಲ್ಲಿ ಮೀಯುತ್ತಾನೆ
ಅಲ್ಲೇ ನಿಂತು 'ಟವಲ್ ಕೊಡು' ಎಂದು ಕೂಗುತ್ತಾನೆ
ಆಮೇಲೆ, 'ಹೊತ್ತಾತು ಬೆಲ್ಟ್ ಕೊಡು, ಸಾಕ್ಸ್ ಕೊಡು,
ಕರ್ಚೀಫ್ ಕೊಡು, ಮಾಸ್ಕ್ ಕೊಡು, ಪೆನ್ನು ಕೊಡು...'
ಎಂದು ಗೋಗರೆಯುತ್ತಾನೆ.
ತಡವಾಯಿತೆಂದು ಹಾಕಿಟ್ಟ ತಿಂಡಿ ತಿನ್ನದೆ
ಬರಿ ಹಾಲು ಕುಡಿದು ಹಾಗೇ ಹೊರಡುತ್ತಾನೆ

ಪ್ರತಿ ಕ್ಲಾಸು ಮುಗಿಸಿ ಮನೆಗೆ ಬರುತ್ತಾನೆ

ಅನುವಾದಾಗಲೊಮ್ಮೆ
ಯಾರದೋ ಕವಿತೆಗೆ, ಅನುವಾದಕ್ಕೆ, ಇನ್ನಾರದೋ
ಗ್ರೇಟ್ ಪೋಸ್ಟ್ ಕಮೆಂಟುಗಳಿಗೆ
ಫೇಸ್‌ಬುಕ್ ಜಾಲಾಡುತ್ತಾನೆ



